(9) ಕುಂದಾಪುರ ತಾ|| ಹಳ್ಳಿಹೊಳೆಯಲ್ಲಿ ಪ್ರೌಢಶಾಲೆ ಪ್ರಾರಂಭಿಸದ ಕುರಿತು

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾ|| ಹಳ್ಳಿಹೊಳೆಗೆ ಪ್ರೌಢಶಾಲೆ ಮಂಜೂರಾಗಿದ್ದು, ಈತನಕ ಪ್ರಾರಂಭವಾಗಿಲ್ಲ. ಪ್ರಾರಂಭಿಸಬೇಕಾದವರು ಯಾರು? ಹಳ್ಳಿಹೊಳೆ ಗ್ರಾಮ ಪಂಚಾಯತಿನವರು ಪೀಠೋಪಕರಣಗಳು ಮತ್ತು ಕಟ್ಟಡವನ್ನು ವ್ಯವಸ್ಥೆ ಮಾಡಿದ್ದು, ಅಧ್ಯಾಪಕರ ನಿಯುಕ್ತಿ ಮಾಡದೇ ಈ ತನಕ ಪ್ರಾರಂಭವಾಗಿಲ್ಲ. ಆದ್ದರಿಂದ ತಕ್ಷಣ ಹಳ್ಳಿಹೊಳೆ ಪ್ರೌಢಶಾಲೆಯನ್ನು ಪ್ರಾರಂಭಿಸಬೇಕಾಗಿ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ

ಕುಂದಾಪುರ ತಾಲ್ಲೂಕು, ಹಳ್ಳಿಹೊಳೆ ಗ್ರಾಮಕ್ಕೆ ಇಲ್ಲಿಯ ತನಕ ಸರ್ಕಾರಿ ಪ್ರೌಢಶಾಲೆ ಮಂಜೂರಾಗಿಲ್ಲ. ಆದ್ದರಿಂದ ಈ ಶಾಲೆಗೆ ಉಪಾಧ್ಯಾಯರನ್ನು ನಿಯುಕ್ತಿಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಸದರಿ ಹಳ್ಳಿಹೊಳೆ ಗ್ರಾಮಕ್ಕೆ ಸರ್ಕಾರಿ ಪ್ರೌಢಶಾಲೆ ಮಂಜೂರು ಮಾಡಲು ನಿರ್ದೇಶಕರು ಪ್ರೌಢಶಿಕ್ಷಣ ರವರು ತಮ್ಮ ಪತ್ರ ಸಂಖ್ಯೆ : ಆ5(5) ನೂ. ಸ.ಪ್ರೌ.ಶಾ : 22:94-95 ದಿನಾಂಕ 8.5.95ರಲ್ಲಿ ಪ್ರಸ್ತಾವನೆ ಸಲ್ಲಿಸಿದ್ದಾರೆ. ಈ ಬಗ್ಗೆ ಪರಿಶೀಲಿಸಲಾಗುವುದು.

(10) ಡಿಫೆನ್ಸ್ ಅಕೌಂಟ್ಸ್ ಇಲಾಖೆಯ ನೌಕರರ ಗೃಹನಿರ್ಮಾಣ ಸಂಘದ ಬಗ್ಗೆ

ಶ್ರೀ ಎನ್. ರಾಜಣ್ಣ (ಭಾರತೀನಗರ) : ಬೆಂಗಳೂರಿನಲ್ಲಿರುವ ಡಿಫೆನ್ಸ್ ಅಕೌಂಟ್ಸ್ ಇಲಾಖೆಯ ನೌಕರರ ಗೃಹನಿರ್ಮಾಣ ಸಹಕಾರ ಸಂಘದವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ 1989ರಿಂದ ಇಲ್ಲಿಯವರೆಗೆ ಸುಮಾರು 30 ಲಕ್ಷ 86 ಸಾವಿರ ರೂ.ಗಳನ್ನು ಕುಡಿಯುವ ನೀರು, ಒಳಚರಂಡಿ, ವಿದ್ಯುತ್ ಹಾಗೂ ಇತರ ನಾಗರೀಕ ಸೌಲಭ್ಯಗಳನ್ನು ಒದಗಿಸಲು ಠೇವಣಿಯಾಗಿ ಇಟ್ಟಿದ್ದು, ಈ ಮೇಲ್ಕಂಡ ಕೆಲಸಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಕೈಗೆತ್ತಿಕೊಂಡಿರುವುದಿಲ್ಲ. ಆದ್ದರಿಂದ ಸದರಿ ಗೃಹನಿರ್ಮಾಣ ಸಂಘದವರೇ ಮೇಲ್ಕಂಡ ಎಲ್ಲಾ ಕೆಲಸಗಳನ್ನು ಪೂರೈಸಿರುತ್ತಾರೆ. ಇದಕ್ಕೆ ಸಂಬಂಧಪಟ್ಟ ಹಾಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಇಟ್ಟಿರುವ ಠೇವಣಿ ಹಣವನ್ನು ವಾಪಸ್ಸು ಮಾಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಒಪ್ಪಿಕೊಂಡಿದ್ದು ಇದುವರೆಗೆ ಸದರಿ ಸಹಕಾರ ಸಂಘಕ್ಕೆ ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ ಸದರಿ ಸೊಸೈಟಿಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಠೇವಣಿ ಇಟ್ಟಿರುವ 30 ಲಕ್ಷ 86 ಸಾವಿರ ರೂ.ಗಳನ್ನು ಸೊಸೈಟಿಗೆ ವಾಪಸ್ಸು ಮಾಡಲು ಕ್ರಮ ಕೈಗೊಳ್ಳಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳವರನ್ನು ಕೋರುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, ಮೆ/ಡಿಫೆನ್ಸ್ಅಕೌಂಟ್ಸ್ ಇಲಾಖೆ ಗೃಹ ನಿರ್ಮಾಣ ಸಹಕಾರ ಸಂಘವು ಅವರ ಬಡಾವಣೆಗೆ ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ವಿದ್ಯುದೀಕರಣ ಮತ್ತು ಇತರೆ ನಾಗರೀಕ ಸೌಲಭ್ಯಗಳನ್ನು ಒದಗಿಸಲು ರೂ. 30,86,542-00 ಗಳನ್ನು ಕಂದಾಯ ಮಾಡಿದ್ದಾರೆ. ಈ ಕೆಲಸಗಳನ್ನು ಪ್ರಾಧಿಕಾರವು ನಿರ್ವಹಿಸದ ಕಾರಣ ಸಂಘವು ಸದರಿ ಹಣವನ್ನು ವಾಪಸ್ಸು ಮಾಡುವಂತೆ ಪ್ರಾಧಿಕಾರವನ್ನು ಕೋರಿದೆ. ಈ ಹಣದ ಪೈಕಿ ಪರಿಶೀಲನಾ ಮತ್ತು ಮೇಲ್ವಿಚಾರಣಾ ಶುಲ್ಕವಾದ ರೂ. 1,19,932-00 ಗಳನ್ನು ಹಿಂದಿರುಗಿಸಲಾಗುವುದಿಲ್ಲ. ಸಂಘವು ನಾಗರೀಕ ಸೌಲಭ್ಯ